ಶ್ರೀ ತ್ಯಾಗರಾಜರ ಕೃತಿಗಳಲ್ಲಿ ಅಧ್ಯಾತ್ಮ

ಡಾ. ಶ್ರೀಕಾಂತಮ್ ನಾಗೇಂದ್ರ ಶಾಸ್ತ್ರೀ

ಸಂತ ತ್ಯಾಗರಾಜರು ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರು, ಹಾಗೂ ಸಂಗೀತೋಪಾಸನೆಯನ್ನು ಮಾಡಿ ಭಗವಂತನ ದರ್ಶನವನ್ನು ಪಡೆದ ಸಂತರು. ಅವರ ಕೃತಿಗಳಲ್ಲೆಲ್ಲ ಭಕ್ತಿ, ತತ್ತ್ವ, ಆಧ್ಯಾತ್ಮಿಕತೆ ತುಂಬಿ ತುಳುಕುತ್ತದೆ. ಈ ಹಿನ್ನೆಲೆಯಲ್ಲಿ ಅವರ ಕೃತಿಗಳನ್ನು ವಿವರಿಸಿರುವ ಲೇಖಕರು ಚಿಂತಲಪಲ್ಲಿ ಸಂಗೀತ ಪರಂಪರೆಗೆ ಸೇರಿದ ಗಾಯಕರು. ಸಂಗೀತ ಶಾಸ್ತ್ರದಲ್ಲಿ ವಿಶೇಷ ಪರಿಣತಿ ಪಡೆದಿರುವ ಅವರು ಪ್ರಸ್ತುತ ಬೆಂಗಳೂರು ಮಹಾರಾಣಿ ಕಾಲೇಜಿನ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಹಾಗೂ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಗೀತಜ್ಞಾನಂ ಶಿವಪ್ರಾಪ್ತೇಃ ಸುತರಾಂ ಕಾರಣಂ ಭವೇತ್ ।
ಗೀತಿಜ್ಞಾನೇನ ಯೋಗಸ್ಯಾದ್ಯೋಗಾದೇವ ಶಿವೈಕ್ಯತಾ ॥

ಶಿವಪ್ರಾಪ್ತಿಗೆ ಸಂಗೀತಜ್ಞಾನವೇ ಮುಖ್ಯಕಾರಣ, ಸಂಗೀತ ಜ್ಞಾನದಿಂದ ಯೋಗವೂ, ಯೋಗದಿಂದ ಮೋಕ್ಷವೂ ಲಭಿಸುತ್ತ ದೆಂಬುದು ಸೂತಸಂಹಿತೆಯ ಅಭಿಪ್ರಾಯ. ನಾದಾನುಸಂಧಾನ ದಿಂದ ಮೋಕ್ಷಪ್ರಾಪ್ತಿಯೆಂದು ಶಾರ್ಙ್ಗದೇವಾದಿ ಶಾಸ್ತ್ರಜ್ಞರೂ ಅಭಿಪ್ರಾಯಪಡುತ್ತಾರೆ. ಆದರೆ ಶ್ರೀತ್ಯಾಗರಾಜರೇ ಹೇಳುವಂತೆ 'ಗೊಪ್ಪತನಮುನಕೆಯಾಸ । ಕುತ್ಸಿತವಿಷಯ ಪಿಪಾಸ । ಮೆಪ್ಪುಲ ಕೈಬಹುವೇಸಮಿಡಿ । ಉಪ್ಪುತಿಲ್ಲೇದರು, ಅದಿ ಕಾದು ಭಜನ ಮನಸಾ' ಎಂದು ಸಮಾಜದಲ್ಲಿ ಆಡಂಬರವಾದ ರೀತಿಯಲ್ಲಿ ಜನರನ್ನು ಮೋಸಗೊಳಿಸಲು ವೇಷ ಹಾಕಿದವರನ್ನು, ಅವರ ಭಜನೆಯ ಪರಿಯನ್ನು ತಿಳಿಸಿದ್ದಾರೆ. ಇಂತಹವರೇ ಪ್ರಪಂಚದಲ್ಲಿ ಹೆಚ್ಚು. ಆದರೆ,

ಜಂತೂನಾಂ ನರಜನ್ಮದುರ್ಲಭಮತಃ ಪುಂಸ್ತ್ವಂ ತತೋ ವಿಪ್ರತಾ।
ತಸ್ಮಾದ್ವೈದಿಕ-ಧರ್ಮಮಾರ್ಗಪರತಾ ವಿದ್ವತ್ತಮಸ್ಮಾತ್ ಪರಮ್।
ಆತ್ಮಾನಾತ್ಮ-ವಿವೇಚನಂ ಸ್ವಾನುಭವೋ ಬ್ರಹ್ಮಾತ್ಮನಾ ಸಂಸ್ಥಿತಿ-
ರ್ಮುಕ್ತಿರ್ನೋ ಶತಕೋಟಿ ಜನ್ಮ ಸುಕೃತೈಃ ಪುಣ್ಯೈರ್ವಿನಾ ಲಭ್ಯತೇ ॥

ಎಂಬಂತೆ ಮನುಷ್ಯಜನ್ಮವೂ, ಪುಂಸ್ತ್ವವೂ, ಬ್ರಾಹ್ಮಣತ್ವವೂ (ಬ್ರಹ್ಮನನ್ನು ಅರಿತವನೆಂಬ ರೀತಿಯಲ್ಲಿ) ವೈದಿಕ ಮಾರ್ಗದಲ್ಲಿ ವಿಶ್ವಾಸವೂ ಶಾಸ್ತ್ರಪಾಂಡಿತ್ಯವೂ ಆತ್ಮಾನಾತ್ಮ ವಿಚಾರಪರತೆಯೂ ಸ್ವಾತ್ಮಾನುಭವವೂ ಬ್ರಹ್ಮಭಾವದಲ್ಲಿರುವುದೂ ನೂರುಕೋಟಿ ಜನ್ಮ ಗಳಲ್ಲಿ ಸಂಪಾದಿಸಿದ ಪುಣ್ಯವಿಲ್ಲದೆ ಲಭಿಸುವುದಿಲ್ಲ. ಇಂತಹ ಶ್ರೇಷ್ಠಜೀವಿಯಾದವರು ಶ್ರೀತ್ಯಾಗರಾಜರು. ಸಂಗೀತಕ್ಕಾಗಿ ಕೃತಿ ರಚನೆಯಾಯಿತೆಂಬ ವಾದಕ್ಕಿಂತ ಆ ಕೃತಿಗಳಲ್ಲಿನ ಅಧ್ಯಾತ್ಮ ಭಾವ ವನ್ನು ನೋಡಿದಾಗ ತಮ್ಮ ಮೋಕ್ಷಾಪೇಕ್ಷೆಗೆ ಕೃತಿಗಳನ್ನು ಸಾಧನ ಮಾಡಿಕೊಂಡಿರುವುದು ಆ ಕೃತಿಗಳ ಅರ್ಥಾನುಸಂಧಾನ ಮಾಡಿ ಕೊಂಡಾಗ ತಿಳಿಯುತ್ತದೆ. ಆದ್ದರಿಂದ ಅವರ ಸಂಗೀತವನ್ನೇ ಗಮನದಲ್ಲಿಟ್ಟುಕೊಂಡರೆ ಆ ಸಂಗೀತವು ನಾದಬ್ರಹ್ಮಾನುಸಂಧಾನ ವೆಂದೂ, ಕೃತಿಗಳು ರಾಮಬ್ರಹ್ಮಾನುಸಂಧಾನವೆಂದೂ ಹೇಳಬಹು ದಾಗಿದೆ. ಅವರ ಪ್ರಕಾರ 'ಸಂಗೀತ ಶಾಸ್ತ್ರಜ್ಞಾನಮು ಸಾರೂಪ್ಯ ಸೌಖ್ಯದಮು' (ಮುಖಾರಿ ರಾಗದ ಕೃತಿ), ಅಂತಹ ಸಂಗೀತ ದಿಂದ ನ್ಯಾಯಾನ್ಯಾಯ ವಿಚಕ್ಷಣತೆಯೂ, ಜಗತ್ತು ಮಾಯೆ ಯೆಂಬುದೂ 'ಜಗಮುಲು ಮಾಯಾಮಯಮನಿ ತೆಲುಸುನು' (ಧನ್ಯಾಸಿ ರಾಗ) ತಿಳಿಯುತ್ತದೆ. ಅಲ್ಲದೆ ಅವರ ಕೃತಿಗಳು ಒಂದರ್ಥದಲ್ಲಿ ಅದ್ವೈತದ ಸಾರವೇ ಆಗಿದೆ. ಶ್ರೀಶಂಕರಾ ಚಾರ್ಯರಂತೆ ಷಣ್ಮತಗಳ ಬಗೆಗೆ ಗೌರವವನ್ನು, ಪರಬ್ರಹ್ಮವಸ್ತುವಿ ನಲ್ಲಿ ಮನಸ್ಸನ್ನು ಇಟ್ಟವರು. 'ಶ್ರುತಿ ಶಾಸ್ತ್ರ ಪುರಾಣವಿಧಾದಿ ಷಣ್ಮತ ನಿಷ್ಕುಲ' (ನಿಜಮರ್ಮಮು - ಉಮಾಭರಣ ರಾಗ) ಎಂದೂ ರಾಮನೇ ಬ್ರಹ್ಮ-ಪರಬ್ರಹ್ಮವೆಂದೂ ನಂಬಿದವರು. ಅವರಲ್ಲಿ ದ್ವೈತಾದ್ವೈತ ವಿವೇಚನವೂ, ಮಾಯಾ ನಿರೂಪಣವೂ, ಭಕ್ತಿ-ಜ್ಞಾನ ವೈರಾಗ್ಯಗಳ ಮಾರ್ಗಗಳೂ ಜ್ಞಾನ-ಭಕ್ತಿಗಳ ಶ್ರೇಷ್ಠತೆಯೂ, ಶ್ರೀವಿದ್ಯೆಯೇ ಮೊದಲಾದ ಅನೇಕ ವಿದ್ಯೆಗಳ ಭಾಗಶಃ ದರ್ಶನವೂ, ಮಹಾವಾಕ್ಯ ನಿರೂಪಣೆಗಳು, ಅಹಂ ಪದಾರ್ಥ ನಿರೂಪಣೆಯೂ, ಕರ್ಮ-ವಿಷಯ-ವಾಸನೆಗಳ ಚಿಂತೆ ಹಾಗೂ ಅವುಗಳ ತ್ಯಾಗವಿಚಾರವೂ, ಸದಸದ್ವಿವೇಕವೂ,

ಗುರೂಪಸತ್ತಿಯೂ ಸೇರಿದಂತೆ ಅನೇಕಾನೇಕ ವಿಷಯಗಳು ಕಂಡುಬಂದು, ಅಧ್ಯಾತ್ಮ ಕೋಶವಾಗಿ ಕಾಣುತ್ತದೆ. ಆದರೆ ಸಂಗೀತಗಾರರು ಅವುಗಳ ಮರ್ಮವನ್ನರಿತು, ಕೇವಲ ರಾಗ-ಸಂಗತಿ-ಲಯಗಳಿಗಷ್ಟೇ ಆ ಕೃತಿಗಳನ್ನು ಉಪಯೋಗಿಸಿಕೊಳ್ಳದೆ, ಸಾಹಿತ್ಯದ ಅರ್ಥಸ್ಫುರಣೆ ಸಾಧ್ಯವಾಗುವಂತೆ ಛೇದಿಸಿ, ಒತ್ತು ಕೊಟ್ಟು ಹಾಡಬೇಕಾದವರ ಸಂಖ್ಯೆ ಹೆಚ್ಚಬೇಕಿದೆ.

ಪೂರ್ವ ರಾಷ್ಟ್ರಪತಿಗಳಾದ ಡಾ. ಎಸ್ ರಾಧಾಕೃಷ್ಣನ್‌ರವರು ಹೇಳುವಂತೆ, '' The name Tyaga-raja means the prince of renouncers, of those who give up worldly desires. Tyaga or renunciation is the way to mental peace and freedom... In the case of Tyaga-raja, renunciation is the result of undistracted devotion to God. ... He expresses the truths of the *Upanishads* and the *Bhagavad-gita* in simple and appealing language. The kingdom of God acquired through devotion is the greatest of all treasures: *Rama Bhakti Samrajyamu*.'' *(Foreword – 'The Spiritual heritage of Thyagraja')*

ಈ ಹಿನ್ನೆಲೆಯಲ್ಲಿ ಅವರ ರಚನೆಗಳಲ್ಲಿ ಕಂಡುಬರುವ ಆಧ್ಯಾತ್ಮಿಕ ವಿಚಾರಗಳನ್ನು ವಿಸ್ತೃತ ಭೀತಿಯ ಹಿನ್ನೆಲೆಯಲ್ಲಿ 'ಕುಂಭೀಪುಲಾಕನ್ಯಾಯ'ದಂತೆ ಸ್ವಲ್ಪವಾಗಿ ನೋಡುತ್ತ ಹೋಗಬಹುದು.

ಗುರೂಪಸತ್ತಿ ಮತ್ತು ಉಪದೇಶ

'ಉಪಸೀದೇದ್ಗುರುಂ ಪ್ರಾಜ್ಞಂ ಯಸ್ಮಾದ್ಬಂಧ ವಿಮೋಕ್ಷಣಮ್' ಎಂಬಂತೆ ಯಾರು ತನ್ನ ಆತ್ಮನ ನಿಜಸ್ವರೂಪವನ್ನು ತಿಳಿಯಬಯಸುವನೋ ಅಂಥಾ ಮುಮುಕ್ಷುವು ಎಲ್ಲ ಬಂಧಗಳಿಂದ ವಿಮೋಚನೆ ಮಾಡಿ ಕಾಪಾಡುವ ಗುರುವಿನ ಬಳಿ ಸಾಗಬೇಕು. ಅಂತಹ ಗುರುವನ್ನು 'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ। ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ' *(ಗೀತೆ, ೪.೩೪)* ಈ ವಿವರವನ್ನು 'ಗುರುಲೇಕ ಎಟುವಂಟಿ ಗುಣಿಕಿ ತೆಲಿಯಕಬೋದು' (ಗೌರೀಮನೋಹರೀ ರಾಗ) ಕೃತಿಯಲ್ಲಿ, ಎಂತಹ ಗುಣವಂತನಾದರೂ ಸದ್ಗುರುವಿನ ಆಶ್ರಯವಿಲ್ಲದೆ ಅಜ್ಞಾನವೆಂಬ ಅರಣ್ಯವನ್ನು ನಾಶಮಾಡಲಾಗುವುದಿಲ್ಲ. ಸತಿ-ಸುತ, ಧನ, ದಾರಾ, ದಾಯಾದಿ ಬಂಧುಗಳಿದ್ದರೂ ಹೃದ್ರೋಗ ಪೀಡಿತನಂತೆ ನರಳುವಂತಾಗುತ್ತದೆ. ಈ ರೋಗಕ್ಕೆ ಮದ್ದು ಎನ್ನುವಂತೆ ತತ್ತ್ವಬೋಧನೆಯನ್ನು ಮಾಡಿ, 'ಗುರುವೇ ಕಾಪಾಡು' ಎಂದು ಪ್ರಾರ್ಥಿಸುತ್ತಾರೆ. 'ನೀ ಚಿತ್ತಮು' ಕೃತಿಯಲ್ಲಿ (ಧನ್ಯಾಸಿ ರಾಗ)ಗುರುವು ಕತಕ ಬೀಜದಂತೆ, ಶಿಷ್ಯನ ಮನಸ್ಸನ್ನು ನಿರ್ಮಲಗೊಳಿಸಿ ತನ್ನಂತೆ ಶಿಷ್ಯನನ್ನು ಮಾಡುತ್ತಾನೆ ಎನ್ನುತ್ತಾರೆ.

ದ್ವೈತ ನಿಷೇಧ ಮತ್ತು ಮಹಾವಾಕ್ಯಗಳು

ಅವರ 'ದ್ವೈತಮು ಸುಖಮಾ?' ಕೃತಿಯಲ್ಲಿ, 'ಜೀವ ಮತ್ತು ಈಶ್ವರಗಳೆರಡು ಎಂಬ ದ್ವೈತವು ಸುಖವೆ? ಜೀವೇಶ್ವರರು ಒಂದೆಂಬ ಅದ್ವೈತವು ಸುಖವೆ? ತ್ಯಾಗರಾಜಾರ್ಚಿತನೇ, ಗಗನ, ಪವನ, ತಪನ, ಭುವನಾದ್ಯವನಿಗಳಲ್ಲಿ ನಗಧರ (ವಿಷ್ಣು) ಅಜ, ಶಿವ, ಇಂದ್ರಾದಿ ದೇವತೆಗಳಲ್ಲಿ, ಭಗವದ್ಭಕ್ತ ಶ್ರೇಷ್ಠರಲ್ಲಿ ನೀನೇ ಇದ್ದೀಯೆ! (ಇಲ್ಲಿ ಪರಬ್ರಹ್ಮ ಸ್ವರೂಪವಾದ ರಾಮನೇ ಎಲ್ಲವೂ ಆಗಿದ್ದಲ್ಲಿ ದ್ವಿವಿಧತ್ವಕ್ಕೆ ಎಲ್ಲಿಯ ಅವಕಾಶ!!) ಏಕೆಂದರೆ 'ರಾಮಾ' ಎಂದರೆ ಆನಂದದ ಇನ್ನೊಂದು ಹೆಸರು; ಪರಬ್ರಹ್ಮಕ್ಕೆ ಹೆಸರು ರಾಮಾ ಎಂದೇ ಎಂದು, 'ರಾಮಾಯನ ಬ್ರಹ್ಮಮುನಕು ಪೇರು' ('ತೆಲಿಸಿ ರಾಮ'; ಪೂರ್ಣಚಂದ್ರಿಕಾ ರಾಗ), 'ನೀ ಜಪಮುಲ ವೇಳ ಜಗಮುಲು ನೀ ವೈ ರಾಜಿಲ್ಲುನಯ್ಯ' ('ಇಂತಕನ್ನ ಆನಂದ ಮೇಮಿ', ಬಿಲಹರಿ ರಾಗ), 'ಶ್ರೀಹರಿಕೀರ್ತನಚೇ ದೇಹಾದಿ ಇಂದ್ರಿಯ ಸಮೂಹಮುಲು ಮರಚಿ ಸೋಽಹಂ ಎನದೇ ಚಾಲು' (ಅದೇ ಕೃತಿ), 'ಉಂಡೇದಿ ರಾಮುಡೊಕಡು ಊರಕೆ ಚೆಡಿಬೋಕು' (ಹರಿಕಾಂಭೋದಿ ರಾಗ)—ಇದರಲ್ಲಿ ಹೇಳುವಂತೆ ಪರಬ್ರಹ್ಮರೂಪವಾದ ರಾಮನೊಬ್ಬನೇ; ಸುಮ್ಮನೆ ಹಾಳಾಗದಿರು -ಎಂದು ಹೇಳುವಾಗ ಬ್ರಹ್ಮಸತ್ಯವನ್ನು ಹೇಳುವ ಮಾತುಗಳು ಈ ದ್ವೈತಭಾವ ನಿಷೇಧವನ್ನು ತರುತ್ತವೆ. ಅಲ್ಲದೆ ಶ್ರೀಶಂಕರರ ಷಣ್ಮತಗಳಲ್ಲಿ ಸೂರ್ಯನನ್ನು 'ಚಂಡಮಾರ್ತಾಂಡ ಮಧ್ಯ ಮಂಡಲಮುನ ಚಲಂಗುಚು' ('ಉಂಡೇದಿ ರಾಮುಡೊಕ್ಕಡು' ಕೃತಿ) ಎಂಬ ಉಲ್ಲೇಖದಲ್ಲಿ 'ಧ್ಯೇಯಸ್ಸದಾ ಸವಿತೃಮಂಡಲ ಮಧ್ಯವರ್ತಿ ನಾರಾಯಣ ಸರಸಿಜಾಸನ ಸನ್ನಿವಿಷ್ಟಃ' ಎಂಬ ಸೂರ್ಯದೇವನ ಪ್ರಾರ್ಥನೆ ರಾಮಪರವಾಗಿ ಕಂಡುಬಂದರೆ, ನೀವಂಟಿ ದೈವಮು (ತೋಡಿ ರಾಗ) ಕೃತಿಯಲ್ಲಿ ಸುಬ್ರಹ್ಮಣ್ಯನ ಪ್ರಾರ್ಥನೆಯೂ, ಕೋವೂರು ಕೃತಿಗಳಲ್ಲಿ ಶಿವನನ್ನೂ, ತಿರುವಟ್ಟಿಯೂರು, ಧರ್ಮಸಂವರ್ಧನಿ ಕೃತಿಗಳಲ್ಲಿ ತ್ರಿಪುರಸುಂದರಿ ಭಗವತಿಯನ್ನೂ, ನೂರಾರು ಕೃತಿಗಳಲ್ಲಿ ವಿಷ್ಣುಸ್ವರೂಪನಾದ ರಾಮನನ್ನೂ, ಶ್ರೀ ಗಣಪತಿನಿ (ಸೌರಾಷ್ಟ್ರ ರಾಗ) ಕೃತಿಯಲ್ಲಿ ಗಣಪತಿಯನ್ನೂ (ಇಲ್ಲಿ 'ಅಭೀಷ್ಟವರದ ಮಹಾಗಣಪತೇ', 'ಶ್ರೀಗಣನಾಥಂ' ಎಂಬ ಕೃತಿಗಳು ತ್ಯಾಗರಾಜರ ಪ್ರಕ್ಷಿಪ್ತ ಗಣಪತಿ ಕೃತಿಗಳಿರುವುದನ್ನು ಗಮನಿಸಬಹುದು) ಅರ್ಚಿಸಿ ಷಣ್ಮತದ ಸಾರ್ಥಕ್ಯವನ್ನು ಎತ್ತಿಹಿಡಿಯುತ್ತಾರೆ. 'ಶಿವ ಮಾಧವುಲ ಭೇದಮೆಂಚರಾದು', 'ಎವರನಿ ನಿರ್ಣಯಿಂಚೇದಿರಾ' ಮೊದಲಾದ ಕೃತಿಗಳಲ್ಲಿ ಹರಿ-ಹರ ಅಭೇದತ್ವವನ್ನು ಹೇಳುತ್ತಾರೆ. 'ತತ್ತ್ವಮೆರುಗ ತರಮಾ (ಗರುಡಧ್ವನಿ ರಾಗ) ತತ್ತ್ವಮಸಿ ವಾಕ್ಯರ್ಥಮು ನೀವನಿ ಪರ ತತ್ತ್ವಮು' ಎಂದೂ ಅಹಂಬ್ರಹ್ಮ ತತ್ತ್ವಅಂತರ್ಯಾಮಿ ('ವೇದ ಪುರೀಶ' - ಪೂರ್ವಿಕಲ್ಯಾಣಿ ರಾಗ) ಎಂದು ಮಹಾವಾಕ್ಯಗಳ ಉಲ್ಲೇಖಗಳನ್ನು ಮಾಡುತ್ತಾರೆ.

ಮಾಯಾ ವಿಕ್ಷೇಪಾದಿ ನಿರೂಪಣ

'ಅವ್ಯಕ್ತ ನಾಮ್ನೀ ಪರಮೇಶ ಶಕ್ತಿರನಾದ್ಯವಿದ್ಯಾ ತ್ರಿಗುಣಾತ್ಮಿಕಾ ಪರಾ' *(ವಿವೇಕಚೂಡಾಮಣಿ, ೧೦೮)* ಎಂಬಲ್ಲಿ ಅವಿದ್ಯೆಗೆ ಮಾಯೆಯೆಂಬ ಇನ್ನೊಂದು ಅವ್ಯಕ್ತವಾದ ಹೆಸರಿದೆಯೆನ್ನುತ್ತಾರೆ

ಶ್ರೀಶಂಕರರು. ಈ ಮಾಯೆಯೂ ಪರಮೇಶ ಶಕ್ತಿಯೇ, ಇದು ಸತ್ತ್ವ, ರಜಸ್ಸು, ತಮೋಗುಣಗಳಿಂದ ಕೂಡಿ ರಜೋಗುಣ ವಿಶೇಷ ದಲ್ಲಿ ವಿಕ್ಷೇಪವೂ, ಈ ವಿಕ್ಷೇಪದಲ್ಲಿ ರಾಗಾದಿ ದುಃಖಿಗಳೂ, ಕಾಮ ಕ್ರೋಧಾದಿ ಘೋರಧರ್ಮಗಳೂ ಇದ್ದು, ಇವುಗಳು ನಮಗೆ ಬಂಧ ಹೇತುಗಳಾಗಿವೆ. ಮನುಷ್ಯನು ಮೇಧಾವಿಯಾಗಿದ್ದರೂ ಶಾಸ್ತ್ರಜ್ಞನಾದರೂ ತಮೋಗುಣಪೂರಿತವಾದ ಆವರಣವು ಅಜ್ಞಾನ, ಆಲಸ್ಯ, ಜಡತ್ವ, ನಿದ್ರಾ, ಪ್ರಮಾದ, ಮೂಢತ್ವಗಳನ್ನುಂಟು ಮಾಡುತ್ತವೆ. ಸತ್ತ್ವವೂ ನೀರಿನಂತೆ ನಿರ್ಮಲವಾದದ್ದಾದರೂ ರಜಸ್ಸು, ತಮಸ್ಸುಗಳೊಡನೆ ಬೆರೆತು ಸಂಸಾರಕ್ಕೆ ಹೇತುವಾಗಿ ಬಿಡುತ್ತವೆ. ಇವುಗಳನ್ನು ಕುರಿತು, ಇವುಗಳ ನಿವಾರಣೆಗೆ ರಾಮನ ಉಪಾಸನೆಯನ್ನು ತ್ಯಾಗರಾಜರು ಅನೇಕ ಕೃತಿಗಳಲ್ಲಿ ಹೇಳಿದ್ದಾರೆ.

ಅಪರಾಧಮುಲಮಾನ್ಪಿ (ದರ್ಬಾರು ರಾಗ): 'ಅತ್ಯಂತ ಮತ್ಸರೀಕೃತನಾಗಿ ಸಾಧುಜನರ ನಿಂದೆಯಲ್ಲಿ ಕಳೆದೆ. ಮದ ದಿಂದಾಗಿ ಸೊಕ್ಕಿ ಜನರ ಮುಂದೆ ತೋರಿಕೆಯ ಜಪವನ್ನೂ, ಕಾಮ ದಿಂದ ಸ್ತ್ರೈಣಲೋಲನಾಗಿ ನಿನ್ನನ್ನು ಮರೆತೆ. (ಇದನ್ನು ತ್ಯಾಗ ರಾಜರು ಪ್ರತಿ ಸಾಮಾನ್ಯ ಜೀವಿಗಳಂತೆ ಆರೋಪಿಸಿಕೊಳ್ಳುವುದಷ್ಟೇ ಹೊರತು ತ್ಯಾಗರಾಜರೇ ಹಾಗೆ ಇದ್ದರೆಂಬುದು ಭಾವವಲ್ಲ.)

ಇನ್ನಾಳ್ಳವಲೆ (ತೋಡಿ ರಾಗ): ಮನಸುನ ವಿಷಯಾದು ಲಂಟ ನೀಕ ನನ್ನು ಮನ್ನಿಂಚು, ಕಾಮಾದಿ ಗುಣಮುಲ ಚೇತ ಗಾಸಿ ಲೇಕ ಕರುಣಿಂಚು – ('ಮನಸ್ಸಿನಲ್ಲಿ ವಿಷಯಾದಿಗಳು ಅಂಟದಂತೆ, ಕಾಮಾದಿ ಗುಣಗಳು ನನ್ನನ್ನು ಇನ್ನಾದರೂ ಹಾಳುಮಾಡದಂತೆ ಕಾಪಾಡು')

ಇಂತಕನ್ನದೆಲ್ಲತರಮಾ(ಸಾವೇರಿ ರಾಗ): 'ನೀನೇ ನನಗೆ ಇಹ –ಪರವಾಗಿದ್ದೀಯೆ. ನನ್ನ ಗೃಹಸ್ಥ ಜೀವನವೂ ನಿನ್ನನ್ನೇ ನಂಬಿ ಕೊಂಡಿದೆ, ಚಂದ್ರನು ನೋಡುವ ಕುಮುದದಂತೆ ನನ್ನನ್ನು ಕಾಪಾಡು.'

ಈ ಮೇನು ಕಲಿಗಿ (ವರಾಳಿ ರಾಗ): 'ಕಾಮಾದಿ ದುರ್ಗುಣ ಸ್ತೋಮ ಪೂರಿತವಾದ ಈ ನರಜನ್ಮವನ್ನು ಪಡೆದು ಆಗಿದೆ. ಕಿರಾತ ನಾದ ವಾಲ್ಮೀಕಿ ಸನ್ಮಾರ್ಗಿಯಾದಂತೆ ನನ್ನನ್ನೂ ಈ ಜನ್ಮದಿಂದ ಕಾಪಾಡು.'

ಕಳಲನೇರ್ಚಿನ (ದೀಪಕ ರಾಗ): 'ಒಳ್ಳೆ ಕಲೆಗಳನ್ನು ಕಲಿತು ಶಾಸ್ತ್ರಜ್ಞ ನಾದರೂ ಅವು ಉದರಂಭರಣಕ್ಕಾಯಿತು. ಅವುಗಳಿಂದ ಕರ್ಮ ವನ್ನು ತೊಲಗಿಸಲು ಸಾಧ್ಯವೆ?'

ಇಂತಹ ಅನೇಕ ಕೃತಿಗಳಲ್ಲಿ ಅಲ್ಲದೆ 'ದುಡುಕುಗಲ' ಕೃತಿ ಯಲ್ಲಿ ವಿವಿಧ ರೀತಿಯ ಚಿತ್ತದೋಷಗಳನ್ನು, ಘೋರ ದುಷ್ಕರ್ಮ ಗಳನ್ನೂ, ಮಾನವನಿಗೆ ಮೇಲ್ಕಂಡ ಮಾಯಾದಿಗಳ ಕಾರಣದಿಂದ ಉತ್ಪನ್ನವಾಗುವ ಸಕಲವಿಧವಾದ ದುಡುಕುಗಳನ್ನೂ ತಾವು ಆರೋಪಿಸಿಕೊಂಡು, ಪಶ್ಚಾತ್ತಾಪದ ಭಾವವೇ ಇದಕ್ಕೆ ಪರಿಹಾರ ವೆಂಬಂತೆ ವಿವರಿಸುತ್ತಾರೆ.

ಜೀವನ್ಮುಕ್ತನ ಲಕ್ಷಣ

'ಸ್ಥಿತಪ್ರಜ್ಞೋಯತಿರಯಂ ಯಃ ಬ್ರಹ್ಮಾನಂದಮಶ್ನುತೇ॥' ಎಂಬಂತೆ ಸರ್ವವಿಕಾರರಹಿತನಾದ, ಸದಾ ಆನಂದವನ್ನೇ ಆಹಾರ ವಾಗಿ ಉಳ್ಳವನು ಜೀವನದಲ್ಲಿದ್ದೂ ಮುಕ್ತನಾಗಿರುತ್ತಾನೆ. ಅಂಥವ ನಿಗೆ ಪ್ರಜ್ಞೆಯು ಸ್ಥಿತವಾಗಿ, ಪ್ರಪಂಚವನ್ನೇ ಮರೆತಂತೆ ಇರುತ್ತಾನೆ. ಇದನ್ನು 'ಅತಡೇ ಧನ್ಯುಡುರಾ ಓ ಮನಸಾ ಕೃತಿ' ಯಲ್ಲಿ (ಕಾಪಿ ರಾಗ) ವಿವರಿಸುತ್ತಾರೆ. ಸದಾಕಾಲವೂ ರಾಮನ ಪಾದಕಮಲವನ್ನು ಸತತವಾಗಿ ಧ್ಯಾನಿಸುವವನೂ, ನಾಮಕೀರ್ತನೆಯಲ್ಲಿ ಆನಂದ ಪಡುವವನೂ, ಯಾವಾಗಲೂ ಚಿಂತೆಯನ್ನು ದೂರೀಕರಿಸಿ ಸಂತೋಷವಾಗಿರುವವನೂ, ಅರಿಷಡ್ವರ್ಗಗಳನ್ನು ತ್ಯಜಿಸಿ ಎಲ್ಲವೂ ಅನಿತ್ಯವೆಂದು ಅರಿತವನೂ, ಬ್ರಾಹ್ಮಣಜನ್ಮವನ್ನು ಪಡೆದು ಶಾಶ್ವತ ವಾಗಿ ಮುಕ್ತಿಫಲವನ್ನು ಭದ್ರಮಾಡಿಕೊಳ್ಳುವವನೂ, ರಾಜಸರ ಸಂಗವಿಲ್ಲದವನೂ, ರಾಮನಲ್ಲೇ ಭಕ್ತಿಯುಳ್ಳವನಾಗಿ ಸರ್ವೋನ್ನತ ಸುಖವನ್ನು ಪಡೆಯುವ ಆತನೇ ನಿಜವಾಗಿ ಧನ್ಯನು. 'ಅನು ರಾಗಮು'(ಸರಸ್ವತಿ ರಾಗ) ಕೃತಿಯಲ್ಲಿ ಭಗವಂತನಲ್ಲಿ ಅನುರಾಗ ವಿಲ್ಲದೆ ಸುಜ್ಞಾನವು ದೊರಕದೆಂದೂ ಇವುಗಳ ಘನವಾದ ಅಂತರ ಜ್ಞಾನಿಗಳಿಗೇ ತಿಳಿಯುವುದೆಂದೂ, ವಿಧವಿಧವಾದ ಊಟಗಳನ್ನು ಮಾಡಿ ತೃಪ್ತಿಯಾಗುವಂತೆ ಮೊದಲು ಸಗುಣೋಪಾಸನೆ, ಧ್ಯಾನ ಗಳಲ್ಲಿ ಸುಖವೆಂದೂ ನಂತರ ಭಗವಂತನ ಮೇಲಿನ ಅನುರಾಗವೇ ಮುಖ್ಯವಾಗುವುದೆಂದೂ ಅಭಿಪ್ರಾಯಪಡುತ್ತಾರೆ.

ಭಕ್ತಿ-ಜ್ಞಾನ

ಮೋಕ್ಷ ಕಾರಣ ಸಾಮಗ್ರ್ಯಾಂ ಭಕ್ತಿರೇವ ಗರೀಯಸೀ।
ಸ್ವಸ್ವರೂಪಾನುಸಂಧಾನಂ ಭಕ್ತಿರಿತ್ಯಭಿಧೀಯತೇ॥

(ವಿವೇಕಚೂಡಾಮಣಿ, ೩೧)

ಮೋಕ್ಷದ ಕಾರಣ ಸಾಮಗ್ರಿಗಳಲ್ಲಿ ಭಕ್ತಿ ಶ್ರೇಷ್ಠವಾದದ್ದು.

'ಭಕ್ತಿಬಿಚ್ಚಮೀಯವೇ'(ಶಂಕರಾಭರಣ ರಾಗ) ಕೃತಿಯಲ್ಲಿ ಮುಕ್ತಿಗೆ, ಅಖಿಲಶಕ್ತಿಗೆ, ತ್ರಿಮೂರ್ತಿಗಳಿಗೂ ಮೀರಿದ ರಾಮ ಭಕ್ತಿಯ ಭಿಕ್ಷೆಯನ್ನು ಕೋರಿದ್ದಾರೆ. 'ಪ್ರಾಣಮು ಲೇನಿ ವಾನಿಕಿ ಬಂಗಾರು ಪಾಗ ಚುಟ್ಟಿ' ಎಂಬ ಚರಣದಲ್ಲಿ ಹೆಣಕ್ಕೆ ಚಿನ್ನದ ಸರಿಗೆಯ ರುಮಾಲನ್ನು ಆಣಿ ವಜ್ರಗಳನ್ನು ಹಾಕಿ ಅಲಂಕರಿಸಿದರೆ ಹೇಗೆ ಉಪಯೋಗವಿಲ್ಲವೋ ಹಾಗೆ ಭಕ್ತಿಯಿಲ್ಲದ ಜೀವನ ವ್ಯರ್ಥ; 'ಊರಕೇ ಕಲ್ಗುನಾ ರಾಮಭಕ್ತಿ'(ಶಹಾನ ರಾಗ) ಕೃತಿ ಯಲ್ಲಿ ಐಹಿಕಸುಖವನ್ನೇ ಅಪೇಕ್ಷಿಸುವವರಿಗೆ ಭಕ್ತಿ ದೊರಕುವು ದಿಲ್ಲ. ಸಂಸಾರ, ಮಕ್ಕಳು, ಬಂಧು-ಬಾಂಧವ-ದಾಯಾದಿ, ಐಶ್ವರ್ಯಗಳು ಅಸ್ಥಿರವೆಂದು ತಿಳಿದು ಸತ್ಪುರುಷರ ದರ್ಶನ, ಅವರ ಸಾನ್ನಿಧ್ಯ, ಬೋಧನೆ, ತತ್ಪರಿಣಾಮವಾಗಿ ಮಾಡುವ ಧ್ಯಾನ, ಅದರಿಂದ ಸಿಗುವ ಮೋಕ್ಷವನ್ನು ಕುರಿತು ಹೇಳುತ್ತಾರೆ.

ಜ್ಞಾನದ ಬಗ್ಗೆ ಅವರಿಗೆ ಒಲವಿದೆ. 'ಮನವ್ಯಾಲಕಿಂಚರಾದಟೇ' (ನಳಿನಕಾಂತಿ ರಾಗ) ಕೃತಿಯಲ್ಲಿ ಕರ್ಮಕಾಂಡಕ್ಕಿಂತ ಜ್ಞಾನ

ಕಾಂಡವೇ ಶ್ರೇಷ್ಠವೆಂಬುದನ್ನು 'ಕರ್ಮಕಾಂಡ ಮತಾಕೃಷ್ಟುಲೈ ಭವಗಹನಚಾರುಲೈ ಗಾಸಿ ಚೆಂದಗಾ' ಎಂದು ಹೇಳುತ್ತಾರೆ. ಅಂತಹ ಜ್ಞಾನವು ತನಗೆ ಬೇಕೆಂದು 'ಜ್ಞಾನಮೊಸಗರಾದಾ' (ಪೂರ್ವಿಕಲ್ಯಾಣಿ ರಾಗ) ಕೃತಿಯಲ್ಲಿ ಬೇಡುತ್ತಾರೆ. 'ಎಟುಲೈನ' (ಸಾಮ ರಾಗ) ಕೃತಿಯಲ್ಲಿ, 'ಹೇಗಾದರೂ ಮಾಡಿ ಈ ಮಾಯಾ ಸಂಸಾರದಿಂದ ಹೊರಕ್ಕೆ ಬಂದು ಭಕ್ತಿಯು ಬರುವುದಕ್ಕೇ ಯತ್ನ ಮಾಡುತ್ತಿರು ಮನಸ್ಸೇ! ಧ್ಯಾನವೇ ಭವರೋಗಕ್ಕೆ ಔಷಧ' ವೆನ್ನುತ್ತಾರೆ.

ಪ್ರಾರಬ್ಧವಿಚಾರ

'ಉತ್ಪನ್ನೇऽಪ್ಯಾತ್ಮನಿ ಜ್ಞಾನೇ ಪ್ರಾರಬ್ಧಂ ನೈವ ಮುಂಚತಿ' *(ಅಪರೋಕ್ಷಾನುಭೂತಿ, ೯೦)* ಆತ್ಮಜ್ಞಾನಿಗೂ ಪ್ರಾರಬ್ಧವು ತಪ್ಪಿದ್ದಲ್ಲ. ಆದರೆ ಹೀಗೆ ಹೇಳಿರುವುದನ್ನು 'ಇತಿಯಚ್ಛ್ರೂಯತೇ ಶಾಸ್ತ್ರೇ ತನ್ನಿರಾಕ್ರಿಯತೇऽಧುನಾ' ಎಂದು ಶ್ರೀಶಂಕರರು ಯಾವ ಕರ್ಮದಿಂದ ಶರೀರವು ಪ್ರಾರಂಭಿಸಲ್ಪಟ್ಟಿತೋ ಅದನ್ನು ಅನುಭವಿಸುವುದರಿಂದ ಪ್ರಾರಬ್ಧವು ನಾಶವಾಗುತ್ತದೆ; 'ಕರ್ಮ ಜನ್ಮಾಂತರೀಯಂ ಯತ್ ಪ್ರಾರಬ್ಧಮಿತಿ ಕೀರ್ತಿತಮ್' *(ಅದೇ, ೯೨)* ಹಿಂದಿನ ಜನ್ಮದ ಕರ್ಮವೇ ಪ್ರಾರಬ್ಧವೆಂದೂ ಹೇಳುತ್ತಾರೆ. ಇದನ್ನೇ ತ್ಯಾಗರಾಜರು, 'ಪ್ರಾರಬ್ಧಮಿಟ್ಲುಂಡಗಾ' (ಸ್ವರಾವಳಿ ರಾಗ) ಕೃತಿಯಲ್ಲಿ, 'ಪ್ರಾರಬ್ಧವು ಹೀಗಿರುವಾಗ ಇನ್ನೊಬ್ಬರನ್ನು ನಿಂದಿಸುವ ಅಗತ್ಯವಿಲ್ಲ. ನೀನಿರುವುದರಿಂದ ಈ ಪ್ರಾರಬ್ಧವು ತೊಲಗುತ್ತದೆ' ಎಂದೂ 'ಹಿಂದಿನ ಜನ್ಮಗಳಲ್ಲಿ ಮಾಡಿರುವ ಕರ್ಮಗಳ ಫಲವು ತಿಳಿಯಿತು. ಅಂಗೈಹುಣ್ಣಿಗೆ ಕನ್ನಡಿ ಏಕೆ? ರಾಗಿಯ ಪೈರಿನ ಮಧ್ಯೆ ಭತ್ತದ ಪೈರು ಎದ್ದುಕಾಣುವಂತೆ ಕಾಣುತ್ತಿದೆ' ('ತೊಲಿ ಜನ್ಮಮುನ', ಬಿಲಹರಿ ರಾಗ) 'ಕರ್ಮಗಳನ್ನು ಪರಿಹರಿಸುವ ಪುಣ್ಯಕರ್ಮಗಳೇನು ಪೇಟೆಯಲ್ಲಿ ಬೆಲೆಗೆ ಸಿಗುತ್ತವೆಯೆ? 'ರಾಮನೇ ನಿನಗೆ ಆಯಾಸವುಂಟುಮಾಡಿ ಪ್ರಯೋಜನವೇನು?'('ತೊಲಿನಚೇಸಿನ' ಶುದ್ಧಬಂಗಾಳ ರಾಗ) ಆ ಕರ್ಮಗಳನ್ನು ಅನುಭವಿಸಿ ತೀರಿಸಿದರೆ ಆಯಿತು ಎಂದು ಚಮತ್ಕಾರವಾಗಿ ಮನಸ್ಸಿಗೆ ಸಂಬೋಧಿಸಿ ಹೇಳುತ್ತಾರೆ. ಪುಣ್ಯಕರ್ಮಗಳನ್ನು ಆರ್ಜಿಸುವ ರೀತಿಯನ್ನೂ ('ಸಮಯಮುದೆಲಿಸಿ' ಅಸಾವೇರಿ ರಾಗ) ಕೃತಿಯಲ್ಲಿಹೇಳುತ್ತಾರೆ. 'ಸಮಯವನ್ನು ತಿಳಿದು ಪುಣ್ಯವನ್ನಾರ್ಜಿಸದ ಮೂರ್ಖನು ಇದ್ದರೇನು? ಸತ್ತರೇನು? ಹುಚ್ಚನ ಮುಂದೆ ಕವಿತೆ ಓದಿದರೇನು? ಬಿಟ್ಟರೇನು? ತುರುಕರ ಬೀದಿಯಲ್ಲಿ ಬ್ರಾಹ್ಮಣನಿಗೆ ಪಾನಕಪೂಜೆ ನಡೆದರೇನು ನಡೆಯದಿದ್ದರೇನು? ಈ ನರಜನ್ಮವೆತ್ತಿದ ಬಳಿಕ ಪುಣ್ಯಾರ್ಜನೆಗೆ ಅದನ್ನು ವಿನಿಯೋಗಿಸಬೇಕು' ಎನ್ನುತ್ತಾರೆ.

ನಿತ್ಯಾನಿತ್ಯ ವಿವೇಕ

ಪರಮಾತ್ಮನು ನಿತ್ಯನೂ, ಅದ್ವಯನೂ, ಅಖಂಡನೂ ಚಿದೇಕರೂಪನೂ ಆಗಿದ್ದಾನೆಂಬುದು ಸ್ಮೃತಿಗಳ ಮತ. ಜ್ಞಾನಿಯಾದವನು ಈ ನಿತ್ಯತ್ವವನ್ನೂ ಹಾಗೆಯೇ ಅಸದ್ವಸ್ತುಗಳನ್ನು ವಿಂಗಡಿಸಿ ಅನಾತ್ಮ ವಸ್ತುಗಳಿಂದ ಮುಕ್ತನಾಗಬೇಕು. ಆದ್ದರಿಂದ ನಿತ್ಯಾನಿತ್ಯಗಳ, ಸತ್ಯಾಸತ್ಯಗಳ ವಿವೇಕವಿಲ್ಲದೆ ಅವನಿಗೆ ಬ್ರಹ್ಮಜ್ಞಾನವು ಪ್ರಾಪ್ತವಾಗಲಾರದು. ಆದ್ದರಿಂದ ಅಂತಹ ವಿವೇಕವನ್ನು ನೀಡಲು ತ್ಯಾಗರಾಜರು ಪರಮಾತ್ಮನನ್ನು ಹೀಗೆ ಕೋರುತ್ತಾರೆ:

'ನಿತ್ಯಾನಿತ್ಯಮುಲನು ಬೋಧಿಂಚೆ' (ನಿತ್ಯಾನಿತ್ಯಗಳನ್ನು ಬೋಧಿಸಿ)'ಕೃತ್ಯಾಕೃತ್ಯಮುಲನು ತೆಲಿಪಿಂಚೆ' (ಕೃತ್ಯಾಕೃತ್ಯಗಳನ್ನು ತಿಳಿಸಿ ಕೊಟ್ಟು) 'ಪ್ರತ್ಯೇಕುಡು ನೀವನಿ ಕನಿಪಿಂಚೆ' (ಅಸದ್ವಸ್ತು ವಿಗಿಂತ ನೀನು ಪ್ರತ್ಯೇಕನೆಂಬುದನ್ನು ತೋರಿಸಿ) 'ಭೃತ್ಯುಡೈನ ತ್ಯಾಗರಾಜುನಿ ಚೈ। ಪಟ್ಟವಿಡುವರಾದು' (ಭೃತ್ಯನಾದ ತ್ಯಾಗರಾಜನ ಕೈಹಿಡಿದು ಬಿಡದಿರು) (ಮಂಜರಿ ರಾಗದ ಕೃತಿ)

ಹೀಗೆ ಶ್ರೀತ್ಯಾಗರಾಜರ ಕೃತಿಗಳು ಸ್ಮೃತಿ-ಶಾಸ್ತ್ರ-ಪುರಾಣಾಗಮಗಳ ಸಾರ. ನುಡಿದಂತೆ ನಡೆದು ಕಡೆಗೆ ಸಂನ್ಯಾಸ ದೀಕ್ಷೆಯನ್ನು ಪಡೆದು ವಿದೇಹಮುಕ್ತಿಯನ್ನು ಹೊಂದಿದ ಶ್ರೀ ತ್ಯಾಗರಾಜರ ಕೃತಿಗಳನ್ನು ವಾಲಾಜಪೇಟೆ ವೆಂಕಟರಮಣ ಭಾಗವತರ ಮೊಮ್ಮಕ್ಕಳಾದ ರಾಮಸ್ವಾಮಿ ಭಾಗವತರು 'ಶ್ರೀತ್ಯಾಗಬ್ರಹ್ಮೋಪನಿಷತ್' ಎಂದೇ ಕರೆದಿದ್ದಾರೆ. ಉಪನಿಷತ್ತುಗಳಿಗೆ ಸಮವಾದ ಈ ಕೃತಿಗಳಲ್ಲಿ ಕೆಲವನ್ನು ಸಾಂದರ್ಭಿಕವಾಗಿ ವಿವರಣೆಯನ್ನು ಇಲ್ಲಿ ಮಾಡಲಾಗಿದೆ. ಈ ಕೃತಿಗಳ ಸಮಷ್ಟಿಯ ಅಧ್ಯಯನವೂ, ಅಧ್ಯಯನ ಪುಷ್ಟಿಯಿಂದ ಅರ್ಥವತ್ತಾಗಿ ಅನುಭವಿಸಿ ಪ್ರದರ್ಶಿಸುವ ಗಾಯನವೂ ಮುಮಕ್ಷುಗಳಿಗೆ ಮೋಕ್ಷಪ್ರದವಲ್ಲವೆ? ಸಂಗೀತಕ್ಕಾಗಿ ಸಂಗೀತವೆಂದೂ ಸಂಗೀತಕ್ಕೆ ಸಾಹಿತ್ಯದ ಮೈತ್ರಿಯ ಅಗತ್ಯವೇ ಇಲ್ಲವೆಂದೂ ಭಾವಿಸುವವರಿಗೆ ಈ ರಚನೆಗಳು ಕೇವಲ ಕಛೇರಿಯಲ್ಲಿ ಪಲುಕುವ ತುಣುಕುಗಳಾದೀತು! ಆದರೆ ತ್ಯಾಗರಾಜರ ಮಾತನ್ನೇ ಈ ಲೇಖನಕ್ಕೆ ಭರತವಾಕ್ಯವಾಗಿಸುವುದಾದರೆ 'ಸಂಗೀತ ಜ್ಞಾನ ವಿಹೀನುಲಕು ಮೋಕ್ಷಮು ಗಲದಾ?'

ತ್ಯಾಗರಾಜರನ್ನು ಅನುಗ್ರಹಿಸಿದ ನಾರದರು

ಒಂದು ದಿನ ಬೆಳಿಗಿನ ಹೊತ್ತು ಸಂನ್ಯಾಸಿಯೊಬ್ಬನು ತ್ಯಾಗರಾಜರ ಮನೆಗೆ ಬಂದ. ಅವನನ್ನು ತ್ಯಾಗರಾಜರು ಉಪಚರಿಸಿ, ಊಟ ಮಾಡಿ ವಿಶ್ರಾಂತಿ ಪಡೆಯಲು ಹೇಳಿದರು. ಆತ ಸ್ನಾನ ಮಾಡಿ ಬರುವುದಕ್ಕಾಗಿ ಕಾವೇರೀತೀರಕ್ಕೆ ಹೋದ; ಹೋಗುವಾಗ ತನ್ನ ಬಳಿ ಇದ್ದ ತಾಳೆಯ ಗ್ರಂಥವನ್ನು ಅಲ್ಲೇ ಬಿಟ್ಟು ಹೋದ. ಎಷ್ಟು ಹೊತ್ತಾದರೂ ಆತ ಮರಳಿ ಬರಲಿಲ್ಲ; ತ್ಯಾಗರಾಜರು ಚಿಂತಿತರಾದರು. ಅವನಿಗಾಗಿ ಕಾಯುತ್ತ ರಾತ್ರಿಯವರೆಗೂ ಉಪವಾಸವಿದ್ದು ನಿದ್ರಿಸಿದರು. ಅಂದು ಕನಸಿನಲ್ಲಿ ಆ ಸಂನ್ಯಾಸಿ ದರ್ಶನವಿತ್ತು, ತಾನು ನಾರದನೆಂದೂ, ತಾಳೆಯ ಗ್ರಂಥವನ್ನು ಕೊಡಲೆಂದೇ ಅಲ್ಲಿಗೆ ಬಂದಿದ್ದಾಗಿಯೂ ತಿಳಿಸಿದನು. ತ್ಯಾಗರಾಜರು ತಾಳೆ ಗ್ರಂಥವನ್ನು ನೋಡಿದರು; ಅದು 'ಸ್ವರಾರ್ಣವಂ' ಎಂಬ ಸಂಗೀತ ಶಾಸ್ತ್ರದ ಗ್ರಂಥವಾಗಿತ್ತು. ಅದರಲ್ಲಿ ಬರೆದಿದ್ದ ಅನೇಕ ಹೊಸ ರಾಗ, ತಾಳಗಳಲ್ಲಿ ಕೃತಿ ರಚನೆ ಮಾಡಿದ ತ್ಯಾಗರಾಜರು ತಮ್ಮ ಶಿಷ್ಯಂದಿರಿಗೂ ಅದನ್ನು ಕಲಿಸಿ, ಪ್ರಚುರ ಪಡಿಸಿದರು.